# ಸೋಲನ್ನೇ ಗೆಲುವಿನ ಸಿರಿ ಮೆಟ್ಟಿಲಾಗಿಸಿದ ಶ್ರೀ ಮಂಜಪ್ಪ



ಕೃಷಿ ಎಂದರೆ ಕಷ್ಟದಾಯಕ ಬದುಕು ಎನ್ನುವವರೇ ಹೆಚ್ಚು. ಆದರೆ ಸ್ವಂತ ಜಮೀನು ಇಲ್ಲದಿದ್ದರೂ ಕೃಷಿ ಮಾಡಿ ಸ್ವತಂತ್ರ ಬದುಕು ಕಟ್ಟಿಕೊಳ್ಳುವ ಛಲ ಮಂಜಪ್ಪ ಎಂಬ ಕೃಷಿಕನನ್ನು ಬಹಳ ಎತ್ತರಕ್ಕೆ ಕರೆದೊಯ್ದಿದೆ. ಗುತ್ತಿಗೆ ಕೃಷಿಯಲ್ಲಿ ಜೀವನ ಆರಂಭಿಸಿ ಇದೀಗ ಹಸಿರು ಮನೆಯಲ್ಲಿ ಸಸಿ ಬೆಳೆದು ಜೀವನ ಹಸನುಗೊಳಿಸಿಕೊಂಡಿದ್ದರ ಜೊತೆಗೆ ಇತರರಿಗೂ ಮಾದರಿ ಎನಿಸಿಕೊಂಡಿದ್ದಾರೆ. ಕೃಷಿಗಾಗಿ ಅವರು ಪಟ್ಟ ಪಾಡು, ಸಂಕಷ್ಟಗಳನ್ನು ಎದುರಿಸಿದ ಪರಿ ನಿಜಕ್ಕೂ ಇತರ ಅನ್ನದಾತರಿಗೊಂದು ಮಾದರಿ ಪಾಠ.

ಹಾವೇರಿ ಜಿಲ್ಲೆಯ ಹಿರೇಕೆರೂರ ತಾಲೂಕಿನ ರಟ್ಟಿಹಳ್ಳಿ ಸಮೀಪದ ಹಿರೇಮೊರಬ ಗ್ರಾಮದ ರೈತ ಶ್ರೀ ಮಂಜಪ್ಪ ಪುಟ್ಟತಮ್ಮನವರ ಮೂಲತಃ ಕೃಷಿ ಕುಟುಂಬದವರು. ಬದುಕಿನ ಅನಿವಾರ್ಯತೆಗೆ ಮಣಿದು ಅನ್ಯರ ಜಮೀನುಗಳನ್ನು ಗುತ್ತಿಗೆಗೆ ಪಡೆದು, ಕಲ್ಲಂಗಡಿ, ತರಕಾರಿ ಬೆಳೆಗಳನ್ನು ಬೆಳೆಯುವುದರೊಂದಿಗೆ ಬೇಸಾಯದ ಬದುಕು ಕಟ್ಟಿಕೊಂಡರು. ಕೃಷಿಗಾಗಿ ಬೇರೆ ಕಡೆಯಿಂದ ಹಣ ಕೊಟ್ಟು ಸಸಿ ತರುವುದಕ್ಕೆ ಬದಲಾಗಿ ಸಸಿಯನ್ನು ಸ್ವತಃ ಬೆಳೆದು ಒಳ್ಳೆಯ ಆದಾಯ ಗಳಿಸಬಹುದೆಂಬ ಕುರಿತು ಪತ್ರಿಕೆಯಲ್ಲಿ ಬಂದ ಲೇಖನದಿಂದ ಪ್ರೇರಿತರಾಗಿ ಗ್ರಾಮದ ಹಳ್ಳದ ಹತ್ತಿರವಿದ್ದ ಕೃಷಿಗೆ ಯೋಗ್ಯವಲ್ಲದ ಅರ್ಧ ಎಕರೆ ಭೂಮಿಯನ್ನು ಗುತ್ತಿಗೆಗೆ ಪಡೆದು ನಾನಾ ಬಗೆಯ ಸಸಿಗಳನ್ನು ಬೆಳೆಯಲು ಪ್ರಾರಂಭಿಸಿದರು. ದುರದೃಷ್ಟವಶಾತ್ ಹಳ್ಳಕ್ಕೆ ಹತ್ತಿರವಿದ್ದುದರಿಂದ ಭಾರಿ ಮಳೆಗೆ ಸಸಿಗಳೆಲ್ಲ ಕೊಚ್ಚಿ ಹೋದವು. ಇದರಿಂದ ಮೂರು ಲಕ್ಷ ರೂ. ನಷ್ಟವಾಯಿತು. ಈ ಸಂದರ್ಭ ಮಂಜಪ್ಪ ಅವರ ಮನಸ್ಸಿಗೆ ತುಂಬ ನೋವನ್ನುಂಟು ಮಾಡಿತು. ಕಣ್ಣೆದುರೇ ಅವರ ಆಸೆ, ಕನಸುಗಳೆಲ್ಲ ನೀರು ಪಾಲಾದರೂ ಧೃತಿಗೆಡೆದೆ ಮತ್ತೆ, ೨೦೧೧ ರಲ್ಲಿ ತಮ್ಮ ಮನೆಯಲಿದ್ದ ಚಿನ್ನವನ್ನು ಕೆನರಾ ಬ್ಯಾಂಕ್‌ನಲ್ಲಿ ಅಡವಿಟ್ಟು ಸಾಲ ಪಡೆದರು. ಜೊತೆಗೆ ಸ್ನೇಹಿತರು ಮತ್ತು ಸಂಬಂಧಿಕರು ಸಹ ಆರ್ಥಿಕ ಸಹಾಯ ನೀಡಿದರು. ಬಂದ ಹಣದಿಂದ ಗ್ರಾಮದ ಹೊರವಲಯದಲ್ಲಿ ಹಳ್ಳದ ನೀರಿಗೆ ಕೊಚ್ಚಿ ಹೋಗದಂತಹ ಅರ್ಧ ಎಕರೆ ಜತೆಗೆ ಇನ್ನೊಂದಿಷ್ಟು ಭೂಮಿಯನ್ನು ೧೫ ವರ್ಷಕ್ಕೆ ಗುತ್ತಿಗೆ ಪಡೆದು ಹಸಿರು ಮನೆಯಲ್ಲಿ ಸಸಿ ಬೆಳೆಯುವ ಸಾಹಸಕ್ಕೆ ಕೈಹಾಕಿದರು. ಅದರಲ್ಲಿ ಮೆಣಸು, ಬದನೆ, ಗಡ್ಡೆಕೋಸು, ಟೊಮೆಟೋ ಮಾತ್ರವಲ್ಲ, ವಿವಿಧ ಹೂವಿನ ಸಸಿಗಳನ್ನು ಬೆಳೆಯುವುದಕ್ಕೆ ಪ್ರಾರಂಭಿಸಿದರು.

ರೈತ ಮಂಜಪ್ಪ ತಮ್ಮ ತಂದೆ, ತಾಯಿ, ಪತ್ನಿ ರೇಣುಕಾ, ಮಕ್ಕಳಾದ ಶಿವನಗೌಡ, ಸಿದ್ದನಗೌಡನ ಜತೆಗೆ ಹಗಲು, ರಾತ್ರಿ ದುಡಿದು ಪರಿಣಾಮವಾಗಿ ಇಂದು ಇವರ ನರ್ಸರಿ ದೊಡ್ಡದಾಗಿ ಬೆಳೆದಿದೆ. ಇವರ ಹಸಿರು ಮನೆಯಲ್ಲೀಗ ೧೫ ಜನ ಪ್ರತಿದಿನ ಕೆಲಸ ನಿರ್ವಹಿಸುತ್ತಾರೆ. ನಿತ್ಯ ಗಂಡು ಆಳಿಗೆ ೨೦೦, ಹೆಣ್ಣು ಆಳಿಗೆ ೧೮೦ ರೂ, ಕೂಲಿ ನೀಡುತ್ತಿದ್ದಾರೆ. ವರ್ಷಕ್ಕೆ ಸುಮಾರು ೧೦ ಲಕ್ಷಕ್ಕೂ ಹೆಚ್ಚು ಸಸಿಗಳನ್ನು ಮಾರಾಟ ಮಾಡುತ್ತಿದ್ದಾರೆ. ಹೊನ್ನಾಳಿ, ಶಿಕಾರಿಪುರ, ಬ್ಯಾಡಗಿ, ಹಾವೇರಿ, ಹಿರೇಕೆರೂರ ಮುಂತಾದ ನಾನಾ ತಾಲೂಕಿನ ರೈತರಲ್ಲಿ ಉತ್ತಮ ಗುಣಮಟ್ಟದ ಸಸಿಗಳು ಸಿಗುತ್ತವೆ ಎಂಬ ಹೆಗ್ಗಳಿಕೆ ಇದ್ದು ಎಲ್ಲರೂ ಇಲ್ಲಿಗೆ ಬಂದು ಸಸಿಗಳನ್ನು ಖರೀದಿಸುತ್ತಾರೆ. ಸದ್ಯ ಇವರ ಹಸಿರು ಮನೆ ಹಿರೇಕೆರೂರ ತಾಲೂಕಿನಲ್ಲೇ ಗುಣಮಟ್ಟದ ಸಸಿಗಳನ್ನು ಬೆಳೆಸುವ ಸ್ಥಳಗಳಲ್ಲಿ ಒಂದೆನ್ನಿಸಿದೆ. ಈಗ ಹೊನ್ನಾಳಿ ತಾಲ್ಲೂಕಿನಲ್ಲೂ ಸ್ವಂತ ಜಮೀನು ಖರೀದಿಸಿ ನರ್ಸರಿ ಪ್ರಾರಂಭಿಸಿದ್ದಾರೆ.

ಪ್ರಸ್ತುತ ದಿನಗಳಲ್ಲಿ ಮನೆಯವರನ್ನು ಹೊರತುಪಡಿಸಿ ಹೊರಗಿನ ೭ ಆಳುಗಳು ಪ್ರತಿದಿನ ಕೆಲಸ ನಿರ್ವಹಿಸುತ್ತಿದ್ದಾರೆ. ಮಕ್ಕಳ ಶಿಕ್ಷಣದ ಹಿನ್ನೆಲೆಯಲ್ಲಿ ಇವರು ಕೃಷಿ ಕೂಲಿ ಕಾರ್ಮಿಕರನ್ನೇ ನೆಚ್ಚಿದ್ದಾರೆ. ಕಾರ್ಮಿಕರಿಗೆ ಉತ್ತಮ ಮನೆ (ಕೊಠಡಿ), ಸೋಲಾರ್ ದೀಪ, ಶುದ್ಧ ಕುಡಿವ ನೀರಿನ ವ್ಯವಸ್ಥೆ ಮಾಡಿಕೊಟ್ಟಿದ್ದಾರೆ. ಸಸಿ ಬೆಳೆಸುವುದರಿಂದಲೇ ಪ್ರತಿ ವರ್ಷ ಸುಮಾರು ೧೦ ಲಕ್ಷಕ್ಕೂ ಹೆಚ್ಚು ಸಸಿ ಉತ್ಪಾದಿಸಿ ಲಕ್ಷಾಂತರ ರೂಪಾಯಿ ಆದಾಯ ಗಳಿಸಿ ಕೃಷಿ ಎಂದರೆ ಮೂಗು ಮುರಿಯುವವರಿಗೆ ಮಾದರಿಯಾಗಿದ್ದಾರೆ. ರೈತ ಶ್ರೀ ಮಂಜಪ್ಪ ಈರಪ್ಪ ಪುಟ್ಟತಮ್ಮನವರ ಸಂಪರ್ಕ ದೂ.ಸಂ.೯೬೮೬೫೧೫೬೧೫.

**– ಗೀತಾ ಎಸ್. ತಾಮಗಾಳೆ**

ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ – ☎: ೯೪೪೮೫೫೨೭೪೫, **ಮಿಂಚಂಚೆ:** geetakvk@gmail.com